	ತಾಲ್ಲೂಕಿನ ಹೆಸರು	ಬಿಡುಗಡೆ ಮಾಡಿರುವ ಮೊತ್ತ (ರೂ.ಗಳಲ್ಲಿ)
1	ಕೋಲಾರ	7.860
2	ಮಾಲೂರು	6.555
3	ಬಂಗಾರು ಪೇಟೆ	7.580
4	ಮುಳಬಾಗಿಲು	6.550
5	ಶ್ರೀನಿವಾಸಪುರ	6.250
6	ಚಿಕ್ಕಬಳ್ಳಾಪುರ	9.200
7	ಚಿಂತಾಮಣಿ	7.630
8	ಶಿಡ್ಲಘಟ್ಟ	7.185
9	ಗೌರಿಬಿದನೂರು	7.080
10	ಬಾಗೇಪಲ್ಲಿ	8.405
11	ಗುಡಿಬಂಡೆ	3.160
	ಒಟ್ಟು	77.450

ಅ) ಇಲ್ಲ.

ಇ) ಬರಗಾಲದ ತೀವ್ರತೆಯನ್ನು ಅನುಸರಿಸಿಯೇ ಕ್ಷಣವನ್ನು ಬಿಡುಗಡೆ ಮಾಡಲಾಗಿದೆ.

ಈ) ಮೇಲೆ ಹೀಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬಂಟ್ವಾಳ ಪುರಸಭೆಯ ಭೌಗೋಳಿಕ ವಿಸ್ತೀರ್ಣ

539 - ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಟ್ವಾಳ ಪುರಸಭೆಯ ಒಟ್ಟು ಭೌಗೋಳಿಕ ವಿಸ್ತೀರ್ಣ ಮತ್ತು ಒಟ್ಟು ಜನಸಂಖ್ಯೆ ಎಷ್ಟು?

ಆ) ಇಷ್ಟು ದೊಡ್ಡ ಪುರಸಭೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಪೂರೈಸಲು ಸಮಗ್ರ ನೀರಿನ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನದಲ್ಲಿದೆಯೇ?

ಇ) ಹಾಗಾದಲ್ಲಿ ಈ ಸಮಸ್ಯೆಯನ್ನು ತೀವ್ರ ನೀಗಿಸುವ ಯೋಚನೆ ಸರ್ಕಾರಕ್ಕಿದೆಯೇ?

ಶ್ರೀ ಕೆ.ಜೆ. ಜಾರ್ಜ್, ವಸತಿ ಮತ್ತು ನಗರಾಭಿವೃದ್ಧಿ ಸಚಿವರು

ಅ) ಒಟ್ಟು ವಿಸ್ತೀರ್ಣ 25.73 ಚದರ ಕಿಲೋಮೀಟರ್‌ಗಳು 1981ನೇ ಜನಗಣತಿಯ ಪ್ರಕಾರ 31,378.

ಆ) ಗಮನದಲ್ಲಿದೆ

ಇ) ರೂ. 99.95 ಲಕ್ಷಗಳ ಅಭಿವೃದ್ಧಿ ಯೋಜನೆಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲು ಸರ್ಕಾರವು ತೀವ್ರವಾಗಿ ಪರಿಶೀಲಿಸುತ್ತಿದೆ.

ಕರ್ನಾಟಕ ಭೂ ಸುಧಾರಣೆ ಕಾಯಿದೆ ಬಗ್ಗೆ.

540 - ಶ್ರೀ ಬಿ. ರಮಾನಾಥ ರೈ (ಬಂಟ್ವಾಳ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಭೂ ಸುಧಾರಣ ಕಾನೂನಿನಡಿಯಲ್ಲಿ ವಾಸ್ತವ್ಯದ ಖಾಯಮಾತಿ ಕೋರಿ ನಮೂನೆ 38ಸಿಯ ಪ್ರಕಾರ ಅರ್ಜಿ ಸಲ್ಲಿಸಲು ಸಮಯದ ಮಿತಿ

ಮೀರಿರುದರಿಂದ, ಹಲವಾರು ಜನರು ಅರ್ಜಿ ಸಲ್ಲಿಸಲಾಗದೇ ಬಾಕಿ ಉಳಿದಿರುವ ಪ್ರಕರಣಗಳು ಸರ್ಕಾರದ ಗಮನದಲ್ಲಿದೆಯೇ

ಅ) ಹೀಗೆ ಅರ್ಜಿ ಸಲ್ಲಿಸಲಾಗದವರಿಗೆ ಮತ್ತೊಮ್ಮೆ ಸಲ್ಲಿಸಲು ಅವಕಾಶ ಕೊಡಲಾಗುವುದೇ

ಇ) ಈ ರೀತಿ ಅರ್ಜಿ ಸಲ್ಲಿಸಲಾಗದ ಬಡ ಮನೆ ನಿವೇಶನದಾರರಿಗೆ ದಬ್ಬಾಳಿಕೆ ನಡೆಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ?

ಈ) ಹಾಗಿದ್ದಲ್ಲಿ ಈ ಬಡ ನಿವೇಶನದಾರರಿಗೆ ರಕ್ಷಣೆ ನೀಡಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಮಲ್ಲಿಕಾರ್ಜುನ ಎಂ.ಖರ್ಗೆ, ಕಂದಾಯ ಸಚಿವರು

ಅ) ಇಲ್ಲ

ಆ) ಇಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಕರ್ನಾಟಕ ಕರಾವಳಿಯಲ್ಲಿ ಕೃಷಿ ತೋಟಗಾರಿಕಾ ಕಾಲೇಜು ಸ್ಥಾಪನೆ

1233 - ಶ್ರೀ ಜಿ.ಎಸ್.ಆಚಾರ್(ಬೈಂದೂರು) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕದ ಕರಾವಳಿಯ ರೈತರ ಮಕ್ಕಳ ಉಪಯೋಗಕ್ಕಾಗಿ ಪ್ರತ್ಯೇಕ ಕೃಷಿ ತೋಟಗಾರಿಕಾ ಕಾಲೇಜನ್ನು ಸ್ಥಾಪಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಈ ವಿಚಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದ ಮನವಿಗಳ ಬಗ್ಗೆ ಯಾವ ತೀರ್ಮಾನ ಕೈಗೊಳ್ಳಲಾಗಿದೆಯೇ?

ಇ) ಸಾಕಷ್ಟು ಅಧ್ಯಯನ ನಡೆಸಿ ಅನುಕೂಲಕರವಾದ ಸೂಕ್ತಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ, ಕೃಷಿ ಮತ್ತು ತೋಟಗಾರಿಕೆ ಸಚಿವರು

ಅ) ಇಲ್ಲ

ಆ) ಮನವಿಯನ್ನು ಪರಿಶೀಲಿಸಿ ಅಲ್ಲಿ ಕೃಷಿ ತೋಟಗಾರಿಕೆ ಕಾಲೇಜು ಅಗತ್ಯವಿಲ್ಲವೆಂದು ತೀರ್ಮಾನಿಸಲಾಗಿದೆ.

ಇ) * ಮೇಲಿನ ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೊಸ ಜಿಲ್ಲೆ ತಾಲ್ಲೂಕುಗಳ ರಚನೆ

1234 - ಶ್ರೀ ಜಿ.ಎಸ್. ಆಚಾರ್ (ಬೈಂದೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸವರೆ?

ಅ) ಮಾನ್ಯ ಮುಖ್ಯಮಂತ್ರಿಗಳು ಹಾಗೂ ಕೆಲವು ಸಚಿವರುಗಳು ತಮ್ಮ ಸಂಚಾರ ಕಾಲದಲ್ಲಿ ಕೆಲವು ಹೊಸ ಜಿಲ್ಲೆ : ತಾಲ್ಲೂಕುಗಳ ರಚನೆಯ ಕುರಿತು ಆಶ್ವಾಸನೆ ನೀಡಿರುವುದನ್ನು ಮಾನ್ಯ ಕಂದಾಯ ಸಚಿವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೊಸ ಜಿಲ್ಲೆ : ತಾಲ್ಲೂಕುಗಳ ರಚನೆ ಯಾವಾಗ ಮಾಡಲಾಗುವುದು

ಇ) ಬಹು ಪ್ರಾಮುಖ್ಯವಾದ ಉಡುಪಿ ಜಿಲ್ಲೆ ಹಾಗೂ ಬೈಂದೂರು ತಾಲ್ಲೂಕು ರಚನೆಗೆ ಆದ್ಯತೆ ನೀಡಲಾಗುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):